# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ–ವಿಭಾಗದ ವಾರ್ಡ್ ಸಂಖ್ಯೆ–152 ಎಸ್.ಜಿ.ಪಾಳ್ಯ ಕಛೇರಿಯಲ್ಲಿ ದಿನಾಂಕ: 21.08.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ–21–08–2021ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಚುನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಎಸ್.ಪ್ರಭಾಕರ್, ಮುಖ್ಯ ಅಭಿಯಂತರರು (ಪೂರ್ವ)ಬಿ.ಬಿ.ಎಂ.ಪಿ. | 9480685379 |
| 2 | ಶ್ರೀ.ಸತೀಶ್.ಡಿ ಸ.ಇಂ–152 ವಾರ್ಡ್ | 9964310730 |
| 3 | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 963222304 |
| 4 | ಶ್ರೀ. ಸುರೇಂದ್ರ ಆಚಾರ್ ಪಿ.ಎಸ್.ಐ ಎಸ್.ಜಿ.ಪಾಳ್ಯ ಪೊಲೀಸ್ ಠಾಣೆ | 8747914339 |
| 5 | ಶ್ರೀ.ಕೆ.ಎಸ್ ಶಿವಾನಂದ ಹೆಡ್ ಕಾನಿಸ್ಟೇಬಲ್ | 9980812789 |
| 6 | ಶ್ರೀ.ಹೋಲಿಯಪ್ಪ ಮಾರ್ಷ್‌ಲ್ | 8904349926 |
| 7 | ಶ್ರೀ.ರಾಮ್ ಸಹಾಯಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ | 6360535611 |
| 8 | ಶ್ರೀಮತಿ.ಆಶಾ.ಹೆಚ್. ಸಹಾಯಕ ಅಭಿಯಂತರರು ಬೇಸ್ಕಾಂ | 9900724229 |
| 9 | ಶ್ರೀ.ಕೃಷ್ಣ.ಸಿ ಕೆಲಸ ಪರಿವೀಕ್ಷಕರು ಬಿ.ಡಬ್ಲೂ.ಎಸ್.ಎಸ್.ಬಿ | 9845768405 |
| 10 | ಶ್ರೀ ಎಸ್.ಜಗದೀಶ್, ಸದಸ್ಯರು | 9341320868 |
| 11 | ಶ್ರೀ.ಎನ್.ಲೋಕೇಶ್ ಸದಸ್ಯರು | 9448579144 |
| 12 | ಶ್ರೀ.ಮಂಜುನಾಥ್.ಪಿ ವಾರ್ಡ್ ಮೇಲ್ವಿಚಾರಕರು ಘ.ತ್ಯಾ.ನಿ | 9740903427 |
| 13 | ಶ್ರೀ.ಮುನಿಂದ್ರ ಮೇಲ್ವಿಚಾರಕರು ಘ.ತ್ಯಾ.ನಿ | 9901002067 |
| 14 | ಶ್ರೀ.ಸ್ವಾಮಿಗೌಡ ತೋಟಗಾರಿಕೆ ಇಲಾಖೆ | 9945378526 |
| 15 | ಶ್ರೀ.ಬಿ.ಟಿ ಕೃಷ್ಣಮೂರ್ತಿ ಸದಸ್ಯರು | 9886339044 |
| 16 | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾ.ನಿ | 9980225272 |
| 17 | ಶ್ರೀ.ವಿಶ್ವಕುಮಾರ್ ವಾರ್ಡ್ ಸದಸ್ಯರು | 9845371963 |
| 18 | ಶ್ರೀ.ಡಾ॥ ಕಮ್ರನ್ ವೈದ್ಯಾಧಿಕಾರಿಗಳು | 9620206422 |

1) ಮಾನ್ಯ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸುತ್ತಾ, ಮೊದಲನೇಯದಾಗಿ ಡಾ॥ ಕಮ್ರನ್‌ರವನ್ನು ಉದ್ದೇಶಿಸಿ ಮಾತನಾಡಿ, ಪ್ರಸ್ತುತ ಕೋವಿಡ್ 3ನೇ ಅಲೆಯ ಬಗ್ಗೆ ಮುಂಜಾಗೃತ ಕ್ರಮಗಳು ಕೈಗೊಂಡಿರುವ ಬಗ್ಗೆ ಹಾಗೂ ಕೋವಿಡ್ ಲಸಿಕೆ ಲಭ್ಯತೆ ಮತ್ತು ಕೋವಿಡ್ ಸೋಂಕಿತರಿಂದ ಪ್ರೈಮರಿ ಕಾಂಟಕ್ಟ್ ಟ್ರೇಸಿಂಗ್ ಸೆಕೆಂಡರಿ ಕಾಂಟಕ್ಟ್ ಟ್ರೇಸಿಂಗ್ ಬಗ್ಗೆ ವಿವರಗಳನ್ನು ಕೇಳಲಾಗಿ, ಡಾ॥ ಕಮ್ರನ್‌ರವರು ಮಾತನಾಡಿ, ನಾನು ಈ ಆರೋಗ್ಯ ಕೇಂದ್ರಕ್ಕೆ ಕೇವಲ ಎರಡು ದಿನಗಳ ಹಿಂದೆ ನಿಯೋಜನೆಗೊಂಡಿರುವ ಕಾರಣ ಪ್ರಸ್ತಾಪಿತ ಮಾಹಿತಿಗಳನ್ನು ಕ್ರೋಢೀಕರಿಸಿ ಮುಂದಿನ ಸಭೆಯಲ್ಲಿ ಸಲ್ಲಿಸುತ್ತೇನೆ ಎಂದು ಸಭೆಗೆ ತಿಳಿಸಿದರು.
2) ಮಾನ್ಯ ಸಭಾಧ್ಯಕ್ಷರು ಮಾತನಾಡಿ, ತಾವರೆಕೆರೆ ಮುಖ್ಯರಸ್ತೆ ಡಾಂಬರೀಕರಣ ಕಾಮಗಾರಿ ಕೈಗೊಂಡಿದ್ದು, ರಸ್ತೆಯಲ್ಲಿದ್ದ ಮ್ಯಾನ್‌ಹೋಲ್‌ಗಳು ರಸ್ತೆಮಟ್ಟದಿಂದ ಕೆಳಗಡೆ ಇದ್ದಿದು, ಇದರಿಂದಾಗಿ ರಸ್ತೆ ಸವಾರರಿಗೆ ತೊಂದರೆಯಾಗಿತ್ತಿರುವುದರಿಂದ ದಿನಾಂಕ 25.08.2021 ರೊಳಗಾಗಿ ರಸ್ತೆ ಮೂಲಭೂತ ಸೌಕರ್ಯ ಕೇಂದ್ರ ಕಛೇರಿ ಮತ್ತು ಬೆಂಗಳೂರು ಜಲಮಂಡಳಿವರು ಜಂಟಿಯಾಗಿ ತಪಾಸಣೆ ಮಾಡಿ ರಸ್ತೆ ಮಟ್ಟಕ್ಕೆ ಮ್ಯಾನ್‌ಹೋಲ್‌ಗಳನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಬೇಕಾಗಿ ಸೂಚಿಸಲಾಯಿತು ಹಾಗೂ ಪ್ರಸ್ತಾಪಿತ ರಸ್ತೆಯ ಪಾದಚಾರಿ ಮಾರ್ಗದ ಕರ್ಬ್‌ಸ್ಟೋನ್‌ಗಳಿಗೆ ಬಿಳಿ ಮತ್ತು ಕಪ್ಪು ಬಣ್ಣವನ್ನು ಲೇಪಿಸಲು ಸೂಚಿಸಲಾಯಿತು ಮತ್ತು ಅಯ್ಯಪ್ಪ ದೇವಸ್ಥಾನ ಹತ್ತಿರ ಮಳೆ ನೀರು ನಿಲ್ಲುತ್ತಿರುವುದು ಕಂಡುಬಂದಿದ್ದು ತೊಳು ಚರಂಡಿ ಅಳವಡಿಸಲು ತಿಳಿಸಲಾಯಿತು.
3) ಶ್ರೀ ಸುರೇಂದ್ರ ಆಚಾರ್ ಪಿ.ಎಸ್.ಐ ಮಾತನಾಡಿ, ವಾರ್ಡ್ ವ್ಯಾಪ್ತಿಯ ರಸ್ತೆ ಬದಿಗಳಲ್ಲಿ ಬೀದಿ ದೀಪಗಳು ಇಲ್ಲದಿರುವುದು ಕಂಡುಬಂದಿದ್ದು, ಇದರಿಂದ ಅಕ್ರಮ ಚಟುವಟಿಕೆಗಳು ನಡೆಯುವುದು ಹೆಚ್ಚಾಗುವುದರಿಂದ ಕೂಡಲೇ ಬೀದಿ ದೀಪಗಳನ್ನು

ಅಳವಡಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಲಾಗಿ, ಇದಕ್ಕೆ ಬೀದಿ ದೀಪ ನಿರ್ವಹಣೆ ವಿಭಾಗದವರು ಕೂಡಲೇ ಕ್ರಮವಹಿಸಬೇಕೆಂದು ಎಂದು ಮಾನ್ಯ ಅಧ್ಯಕ್ಷರು ಸೂಚಿಸಿದರು.

4) ಸಭಾಧ್ಯಕ್ಷರು ಮಾತನಾಡಿ, ಮಾರ್ಷಲ್ ರವರಿಗೆ ಮಹಾಮಾರಿ ಕೊರೋನ ರೋಗ ಮೂರನೇ ಅಲೆ ಹರಡದಂತೆ ತಡೆಯಲು ಮುಂಜಾಗ್ರತ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಭೆ, ಸಮಾರಂಭಗಳು ನಡೆದರೆ ತಪಾಸಣೆ ಮಾಡಿ, ಪರವಾನಿಗೆ ಇಲ್ಲದಿದ್ದರೆ ಪರಿಶೀಲಿಸಿ ಅಂತಹ ಸಮಾರಂಭಗಳನ್ನು ಸ್ಥಗಿತಗೊಳಿಸತಕ್ಕದ್ದು, ಮತ್ತು ಕಡ್ಡಾಯವಾಗಿ ಮಾಸ್ಕ್ ದರಿಸುವುದು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳ ಜಾಗೃತಿ ಮೂಡಿಸಬೆಕು ಹಾಗೂ ಮಾಸ್ಕ ದರಿಸದೇ ಇದ್ದವರಿಗೆ ದಂಡ ವಸೂಲಿ ಮಾಡಲು ಸಭೆಯಲ್ಲಿ ಹಾಜರಿದ್ದು ವಾರ್ಡ್ ಸದಸ್ಯರು ರವರಿಗೆ ಸೂಚಿಸಿದರು.

5) ಮಾನ್ಯ ಸಭಾಧ್ಯಕ್ಷರು ವಾರ್ಡ್ ಅಭಿಯಂತರರನ್ನು ಉದ್ದೇಶಿಸಿ ಮತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಎಷ್ಟು ರಸ್ತೆಗಳಿವೆ, ಎಷ್ಟು ರಸ್ತೆಗಳಲ್ಲಿ ರಸ್ತೆಗುಂಡಿಗಳಿವೆ, ಇವುಗಳಲ್ಲಿ ಎಷ್ಟು ರಸ್ತೆಗುಂಡಿಗಳನ್ನು ಮುಚ್ಚಲಾಗಿದೆ, ಇನ್ನೂಳಿದ ರಸ್ತೆಗುಂಡಿಗಳನ್ನು ಮುಚ್ಚಲು ಯಾವ ಯಾವ ಕ್ರಮಗಳನ್ನು ಜರುಗಿಸಲಾಗಿದೆ ಇದರ ಬಗ್ಗೆ ಸವಿಸ್ತಾರವಾದ ಕ್ರಿಯಾಯೋಜನೆಯನ್ನು ಸಭೆಗೆ ಸಲ್ಲಿಸಲು ಸೂಚಿಸಲಾಯಿತು. ಇದಕ್ಕೆ ವಾರ್ಡ್ ಅಭಿಯಂತರರು ಮಾತನಾಡಿ ಕೇಳಲಾದ ಎಲ್ಲಾ ವಿವರಗಳನ್ನು ಮುಂದಿನ ಸಭೆಯಲ್ಲಿ ಹಾಜರಿಪಡಿಸುತ್ತೇನೆಂದು ಸಭೆಗೆ ತಿಳಿಸಿದರು

6) ಮಾನ್ಯ ಅಧ್ಯಕ್ಷರು ಮಾತನಾಡಿ, ಹಾಲಿ ಮಳೆಗಾಲಕ್ಕೆ ವಾರ್ಡ್ ವ್ಯಾಪ್ತಿಯಲ್ಲಿ ಮುಂಜಾಗ್ರತ ಕ್ರಮಗಳ ಬಗ್ಗೆ ವರದಿಯನ್ನು ವಾರ್ಡ್ ಅಭಿಯಂತರರಿಗೆ ಕೇಳಿದಾಗ ಈ ಬಗ್ಗೆ ಮಳೆಗಾಲದ ತಾತ್ಕಾಲಿಕ ನಿಯಂತ್ರಣ ಕೊಠಡಿಯನ್ನು ಉಪವಿಭಾಗದ ಕಚೇರಿಯಲ್ಲಿ ನಿರ್ಮಿಸಲಾಗುವುದು ಎಂದು ತಿಳಿಸಿದರು. ಈ ಸಂಬಂಧ ಅಧ್ಯಕ್ಷರು ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಟಿ.ಎಂ ಲೇಔಟ್ ಉಪವಿಭಾಗದವರಿಗೆ ದೂರವಾಣಿ ಮುಖೇನ ವಿಚಾರಿಸಿದಾಗ ಈಗಾಗಲೇ ಉಪವಿಭಾಗದಲ್ಲಿ ತಾತ್ಕಾಲಿ ನಿಯಂತ್ರಣ ಘಟಕವನ್ನು ನಿರ್ಮಿಸಲಾಗಿದೆ ಹಾಗೂ ಮುಂಬರುವ ಮಳೆಗಾಲಕ್ಕೆ ಅವಶ್ಯಕವಿರುವ ಅಗತ್ಯ ಕ್ರಮಗಳನ್ನು ಜರುಗಿಸಲಾಗಿದೆ.

7) ಮಾನ್ಯ ಅಧ್ಯಕ್ಷರು ಮಾತನಾಡಿ, ಪಾಲಿಕೆ ವಾರ್ಡ್ ಅನುದಾನಡಿಯಲ್ಲಿ 2021–22ನೇ ಸಾಲಿಗೆ ಮಿಸಲಿಟ್ಟ POW Works and 15th Finance grant Work ಕಾಮಗಾರಿಗಳ ಬಗ್ಗೆ ಕ್ರಿಯಾಯೋಜನೆಗಳನ್ನು ಮುಂದಿನ ಸಭೆಗೆ ಸಲ್ಲಿಸಲು ವಾರ್ಡ್ ಅಭಿಯಂತರರಿಗೆ ಸೂಚಿಸಿದರು ಹಾಗೂ ಹಾಲಿ ವಾರ್ಡ್ ವ್ಯಾಪ್ತಿಯಲ್ಲಿ ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಕೇಳಲಾಗಿ, ಇದಕ್ಕೆ ವಾರ್ಡ್ ಅಭಿಯಂತರರು ಮಾತನಾಡಿ ಚಿಕ್ಕಾಡುಗೋಡಿ ಪ್ರದೇಶದಲ್ಲಿ ಚರಂಡಿ ಕಾಮಗಾರಿ ಮತ್ತು ಮಾರುತಿನಗರ ಇಂದಿರಾ ಕ್ಯಾಟಿಂನ್ ಹಿಂಭಾಗ ಕಾಬೂಲ್ ಸ್ಟೋನ್ ರಸ್ತೆ ಕಾಮಗಾರಿ ಪ್ರಗತಿಯಲ್ಲಿರುತ್ತವೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಸಭೆ ಅಧ್ಯಕ್ಷರು ಮಾತನಾಡಿ ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

S Prabhaka
(ಶ್ರೀ. ಎಸ್.ಪ್ರಭಾಕರ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

<u>ಪ್ರತಿಯನ್ನು:</u>

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ.